# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಪ್ರಶಸ್ತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ  ದಿನಾಂಕ : DATE : 26/1/2020

# 6 ಯೋಧರಿಗೆ ಶೌರ್ಯ ಚಕ್ರ

**ನವದೆಹಲಿ:** ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆಗಳಲ್ಲಿ ಸಾಹಸ ತೋರಿದ 6 ಸೇನಾಧಿಕಾರಿಗಳು ಶೌರ್ಯ ಚಕ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕಳೆದ ವರ್ಷ ಫೆಬ್ರುವರಿಯಲ್ಲಿ ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಸುಬೇದಾರ್ ಸೋಂಬಿರ್ ಸಿಂಗ್‌ರಿಗೆ ಮರಣೋತ್ತರವಾಗಿ ಶೌರ್ಯ ಚಕ್ರ ಪ್ರಶಸ್ತಿ ನೀಡಲಾಗುತ್ತಿದೆ. ಲೆಫ್ಟಿನೆಂಟ್ ಕರ್ನಲ್ ಜ್ಯೋತಿಲಾಮಾ, ಮೇಜರ್ ಕೊಂಜೆಂಗಬಾಮ್ ಬಿಜೇಂದರ್ ಸಿಂಗ್, ನಾಯಕ್ ಸುಬೇದಾರ್ ನರೇಂದ್ರ ಸಿಂಗ್, ನಾಯ್ಕ್ ನರೇಶ್ ಕುಮಾರ್, ಕರಮ್‌ದೇವ್ ಒರಾನ್‌ಗೆ ಗೃಹ ಸಚಿವಾಲಯ ಶೌರ್ಯ ಚಕ್ರ ಪ್ರಶಸ್ತಿ ಘೋಷಣೆ ಮಾಡಿದೆ.



ಲೆಫ್ಟಿನೆಂಟ್ ಮತ್ತು ಮೇಜರ್ ಹುದ್ದೆಯಲ್ಲಿರುವ 19 ಯೋಧರಿಗೆ ಪರಮ ವಿಶಿಷ್ಟ ಸೇವಾ ಪದಕ, ನಾಲ್ವರಿಗೆ ಉತ್ತಮ ಯುದ್ಧ ಸೇವಾ ಪದಕ, 22 ಜನರಿಗೆ ಅತಿ ವಿಶಿಷ್ಟ ಸೇವಾ ಪದಕ, 8 ಜನರಿಗೆ ಯುದ್ಧ ಸೇವಾ ಪದಕ, 107 ಜನರಿಗೆ ಶೌರ್ಯ ಸೇನಾ ಪದಕ, 36 ಜನರಿಗೆ ಸೇನಾ ಪದಕ, 76 ಜನರಿಗೆ ವಿಶಿಷ್ಟ ಸೇವಾ ಪದಕ ಪ್ರಶಸ್ತಿಗಳನ್ನು ಘೋಷಿಸಲಾಗಿದೆ.

**ಜಮ್ಮು-ಕಾಶ್ಮೀರ ಪೊಲೀಸರಿಗೆ ಅತೀ ಹೆಚ್ಚು ಪದಕ:** ಜಮ್ಮು- ಕಾಶ್ಮೀರ ಪೊಲೀಸರಿಗೆ ಒಟ್ಟು 108 ಶೌರ್ಯ ಪದಕಗಳು ಘೋಷಣೆಯಾಗಿವೆ. ಕೇಂದ್ರೀಯ ಮೀಸಲು ಪೊಲೀಸ್ ಪಡೆಗೆ (ಸಿಆರ್‌ಪಿಎಫ್) 76 ಪದಕ ಘೋಷಿಸಲಾಗಿದೆ. ಕಾಶ್ಮೀರದಲ್ಲಿ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಮೂವರು ಪೊಲೀಸರು ರಾಷ್ಟ್ರಪತಿಗಳಿಂದ ನೀಡುವ ಉನ್ನತ ಶೌರ್ಯ ಪದಕಗಳಿಗೆ ಆಯ್ಕೆಯಾಗಿದ್ದಾರೆ. ಈ ಬಾರಿ ಒಟ್ಟು 1,040 ಶೌರ್ಯ ಪದಕಗಳನ್ನು ಘೋಷಿಸಲಾಗಿದ್ದು, ಇದರಲ್ಲಿ 93 ವಿಶೇಷ ಸೇವಾ ಪದಕಗಳು ಮತ್ತು 657 ಶ್ರೇಷ್ಠ ಸೇವಾ ಪದಕಗಳು ಸೇರಿವೆ. ಜಾರ್ಖಂಡ್‌ಗೆ 33, ಒಡಿಶಾಗೆ 16, ದೆಹಲಿ ಪೊಲೀಸರಿಗೆ 12, ಮಹಾರಾಷ್ಟ್ರ 10, ಛತ್ತೀಸಗಢ 8, ಬಿಹಾರ 7, ಪಂಜಾಬ್ 4 ಮತ್ತು ಮಣಿಪುರ ಪೊಲೀಸರು 2 ಪದಕಗಳನ್ನು ಪಡೆದಿದ್ದಾರೆ.